## ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

## ಸಿ.ಸಿ.ಸಂಖ್ಯೆ: 388/18

| | | |
|---|---|---|
| ಸಾಕ್ಷಿದಾರರ ಹೆಸರು | ರಮಾಮಣಿ | ಸಿ.ಡಬ್ಲ್ಯೂ: 5 |
| ಗಂಡನ / ತಂದೆ ಹೆಸರು | ಎನ್ ಚಂದ್ರಯ್ಯ | ಪಿ.ಡಬ್ಲ್ಯೂ: 4 |
| ವಯಸ್ಸು | 51 ವರ್ಷ | |
| ಉದ್ಯೋಗ | ಅಬಕಾರಿ ನಿರೀಕ್ಷಕರು | |
| ವಾಸಸ್ಥಳ | ಕೋಲಾರ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 25.09.2025

**ಮುಖ್ಯ ವಿಚಾರಣೆಃ ಸಸಅ ರಿಂದ**

ನಾನು 04.04.18 ರಿಂದ 20.07.18 ರವರೆಗೆ ಹಾಸನ ವಲಯ 2 ರಲ್ಲಿ ಕರ್ತವ್ಯ ಮಾಡಿರುತ್ತೇನೆ. ದಿ.24.04.2018 ರಂದು ಸಂಜೆ 5.30 ಕ್ಕೆ ಕಾಡ್ಲೂರಿನಿಂದ ಕೂಡಿಗೆಗೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಮಾಹಿತಿ ಮೇರೆಗೆ ಪಂಚರನ್ನು ಬರಮಾಡಿಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಒಬ್ಬ ಆಸಾಮಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡಿದ್ದು ಶೋಧನಾ ಸಮುಚ್ಚಿತ ವಾರೆಂಟ್ ತಯಾರಿಸಿ ಪಂಚರ ಸಹಿ ಪಡೆದು ಆತನನ್ನು ಸುತ್ತುವರೆದು ಹಿಡಿದು ಚೀಲವನ್ನು ತೆರೆದು ನೋಡಲಾಗಿ ಆತನ ಬಳಿ 90 ಎಂ ಎಲ್ ನ 27

ಒರಿಜಿನಲ್ ಚಾಯ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅದರ ಬಗ್ಗೆ ಪರವಾನಗಿ ಇರುವುದಿಲ್ಲ ಎಂದು ತಿಳಿಸಿದ್ದು ಆತನ ಹೆಸರು ಸಂತೋಷ್ ಬಿನ್ ರಿಚ್ಚಣ್ಣ ಶೆಟ್ಟಿ ಉಃ ಚಂದ್ರಶೇಖರ್, 27 ವರ್ಷ ಎಂದು ತಿಳಿಸಿರುತ್ತಾರೆ. ಸದರಿ ಟೆಟ್ರಾ ಪ್ಯಾಕ್ ಗಳನ್ನು ಸಂಜೆ 5.45 ರಿಂದ 6.30 ರವರೆಗೆ ಪಂಚನಾಮೆ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಠಾಣೆಗೆ ಹಿಂದಿರುಗಿ ಪ್ರ.ವ.ವ ತಯಾರಿಸಿರುತ್ತೇನೆ. ಚಾಸಾ 7 ರವರು ಈಗ ಮರಣ ಹೊಂದಿರುತ್ತಾರೆ. ಅವರು ಈ ಪ್ರಕರಣದಲ್ಲಿ ಅಂತಿಮ ವರದಿ ಸಲ್ಲಿಸಿರುತ್ತಾರೆ.

ಸಾಕ್ಷಿ ನಿಪಿ 1 ಮತ್ತು 2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1ಡಿ, ನಿಪಿ 2ಸಿ ಎಂದು ಗುರುತಿಸಲಾಯಿತು. ಪ್ರ.ವ.ವ ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಟಿ ಎಸ್ ಎಸ್ ಪರವಾಗಿ ಕೆ ಜಿ ಎನ್ ವಕೀಲರಿಂದಃ**

ಸಂಜೆ 5.30 ಕ್ಕೆ ಪ್ರ.ವ.ವ.ಯನ್ನು ಕಛೇರಿಯಲ್ಲಿ ದಾಖಲಿಸಿರುತ್ತೇನೆ. ಸಂಜೆ 5.30 ರಿಂದ 6.30 ರವರೆಗೆ ಮಹಜರ್ ಮಾಡಿರುತ್ತೇನೆ. ನಿಪಿ 1 ರಲ್ಲಿ ಪ್ರಕರಣದ ಸಂಖ್ಯೆಯನ್ನು ತಿಳಿಸಿದ್ದೀರ ಎಂದರೆ ತಿಳಿಸಿರುವುದಿಲ್ಲ. ಮಹಜರ್ ಮಾಡಿದ ಸಮಯದಲ್ಲಿ ಸಾಕ್ಷಿದಾರರ ಸಹಿ ಪಡೆದಿರುತ್ತೇನೆ. ಮು.ಮಾ.1 ರ ಬ್ಯಾಚ್ ನಂ. ಮತ್ತು ತಯಾರಿಕಾ ದಿನವನ್ನು ನಿಪಿ 1 ರಲ್ಲಿ ತೋರಿಸಿದ್ದೀರ ಎಂದರೆ ಇಲ್ಲ. ಆಲೂರು ಕಾಡ್ಲೂರಿನಲ್ಲಿ ಗಸ್ತಿನಲ್ಲಿದ್ದಾಗ ಸಂಜೆ 5.15 ಕ್ಕೆ ಮಾಹಿತಿ

ಬಂದಿರುತ್ತದೆ. ನಿಪಿ 1 ರಡಿಯಲ್ಲಿ ಆರೋಪಿಯ ವಶದಿಂದ ಮು.ಮಾ.1ನ್ನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರ.ವ.ವ. ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 7 ರವರು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .